# <u>ಕರ್ನಾಟಕ ಸರ್ಕಾರ</u>

**ಸಂಖ್ಯೆ: ಅಪಜೀ 24 ಇಎನ್‌ವಿ 2018**

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 30.09.2020

## <u>ಅಧಿಸೂಚನೆ</u>

ಜೈವಿಕ ವೈವಿಧ್ಯ ಅಧಿನಿಯಮ, 2020ರ (2003ರ 18ನೇ ಕೇಂದ್ರೀಯ ಶಾಸನ) ಸೆಕ್ಷನ್ 63ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005ಕ್ಕೆ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸಿದೆ. ಅವುಗಳೆಂದರೆ,

## <u>ನಿಯಮಗಳು</u>

**1. ಹೆಸರು ಮತ್ತು ಪ್ರಾರಂಭ :- (1)** ಈ ನಿಯಮಗಳನ್ನು ಕರ್ನಾಟಕ ಜೈವಿಕ ವೈವಿಧ್ಯ (ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 15ಕ್ಕೆ ತಿದ್ದುಪಡಿ :- ಕರ್ನಾಟಕ ಜೀವವೈವಿಧ್ಯ ನಿಯಮಗಳು, 2005ರ ನಿಯಮ 15ರಲ್ಲಿ**

(i) ಉಪ ನಿಯಮ (1)ರ ನಂತರ ಈ ಕೆಳಗಿನಂತೆ ಸೇರಿಸತಕ್ಕದ್ದು, ಅಂದರೆ:-

" (1ಎ) ಯಾವುದೇ ಅರ್ಜಿದಾರನು (ವ್ಯಕ್ತಿ ಅಥವಾ ಕಂಪನಿ ಸಂಸ್ಥೆ ಅಥವಾ ಘಟಕ) ಪ್ರತಿ ಹಣಕಾಸಿನ ಅಥವಾ ವಿತ್ತೀಯ ವರ್ಷದಲ್ಲಿ ಸಲ್ಲಿಸಲಾದ ನಮೂನೆ-1ರ ಅರ್ಜಿಯ ಜೊತೆಗೆ ಮಂಡಳಿಯ ಹೆಸರಿಗೆ ನೀಡಿದ ಚೆಕ್ ಅಥವಾ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಅಥವಾ ಯಾವುದೇ ರೀತಿಯ ಇ-ಪಾವತಿಯ ಮುಖಾಂತರ ಒಂದು ಸಾವಿರ ರೂಪಾಯಿಗಳ ಶುಲ್ಕವನ್ನು ಸಲ್ಲಿಸತಕ್ಕದು, ಒಂದು ವೇಳೆ ಅರ್ಜಿಯು ತಿರಸ್ಕೃತಗೊಂಡಲ್ಲಿ ಪಾವತಿಸಿದ ಶುಲ್ಕದ ಐದನೇ ನಾಲ್ಕು ಭಾಗವನ್ನು ಅರ್ಜಿದಾರರಿಗೆ ಮರುಪಾವತಿಸಕ್ಕದ್ದು".

(ii) ಉಪ ನಿಯಮ (3)ರ ನಂತರ ಈ ಕೆಳಗಿನಂತೆ ಸೇರಿಸತಕ್ಕದ್ದು, ಅಂದರೆ:-

" (4) ಮಂಡಳಿಯ ಅಧಿಕೃತ ಅಧಿಕಾರಿಯ ಮತ್ತು ಅರ್ಜಿದಾರನ ಸಹಿ ಇರುವ ಲಿಖಿತ ಒಪ್ಪಂದದ ಮೂಲಕ ಹೊಂದುವಿಕೆ ಅಥವಾ ಸಂಗ್ರಹಣೆಯನ್ನು ನಿಯಂತ್ರಿಸತಕ್ಕದ್ದು, ಮಂಡಳಿಯು ಲಿಖಿತ ಒಪ್ಪಂದದ ಸ್ವರೂಪವನ್ನು ನಿರ್ಧರಿಸತಕ್ಕದ್ದು.

(5) ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ರಕ್ಷಣೆ ಮಾಡುವ ಉದ್ದೇಶಕ್ಕಾಗಿ ಅವುಗಳನ್ನು ಹೊಂದುವ ಅಥವಾ ಸಂಗ್ರಹಿಸುವ ಮಂಜೂರಾತಿಯನ್ನು ನೀಡುವ ಮೊದಲು ಆಯಾ ಉದ್ದೇಶಕ್ಕಾಗಿ ವಿಶೇಷ ನಿಬಂಧನೆಗಳನ್ನು ವಿಧಿಸತಕ್ಕದ್ದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಮುರುಳಿಧರ ಎಸ್.ತಳ್ಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,
(ಜೀವಿಪರಿಸ್ಥಿತಿ ಮತ್ತು ಪರಿಸರ)